ವಾರ ಜಿಮ್‌ನಲ್ಲೇ ವಾಸ ಮಾಡಬೇಕು" ಎಂದಳು. ಆಲ್ಬರ್ಟ್ ಹೇಳಿದ "ನಿನ್ನ ಮೇಲಿನ ಪ್ರೀತಿಯಿಂದ ಇದನ್ನೆಲ್ಲಾ ಮಾಡಿದ್ದಾರೆ. ನಿನು ಹಾಗೆ ಮಾತನಾಡಬಾರದು, ಬೇಬಿ" ಎಂದು ಪದ್ಮಾ ಅವರ ಶಹಬಾಸ್ ಗಳಿಸಿದ.

ಹೋಳಿಗೆ ತಿನ್ನುತ್ತಾ ಆಲ್ಬರ್ಟ್ "ಈ ತರಹ ತಿಂಡಿಯನ್ನು ನಾನು ತಿಂದಿದ್ದೇ ಇಲ್ಲ" ಎಂದ. ಅನಿತಾ "ನನ್ನ ಹೊಟ್ಟೆ ತುಂಬಿದೆ. ನನಗೆ ಸ್ವೀಟ್ ಬೇಡ" ಎಂದು ಹಟ ಹಿಡಿದಳು. "ಯು ಆರ್ ಮಿಸ್ಸಿಂಗ್ ಸಮ್‌ತಿಂಗ್" ಎಂದು ಅವನು ತಾನು ತಿನ್ನುತ್ತಿದ್ದ ಹೋಳಿಗೆಯನ್ನು ಮುರಿದು ಅವಳ ಬಾಯಿಯಲ್ಲಿ ಬಲಾತ್ಕಾರವಾಗಿ ಇಟ್ಟ. ಚಪ್ಪಾಳೆ ತಟ್ಟಿದರು ಪದ್ಮಾ. ಉದ್ವಿಗ್ನರಾದರು ರವಿಶಂಕರ್.

ಊಟದ ನಂತರ ಅನಿತಾ ಮತ್ತು ಆಲ್ಬರ್ಟ್ ಕಾರಿನಲ್ಲಿ ಸಿಡ್ನಿಗೆ ಹಿಂದಿರುಗುವ ಕಾರ್ಯಕ್ರಮ. ಮಾರನೆಯದಿನ ಬೆಳಗ್ಗೆ ಎಂಟಕ್ಕೆಲ್ಲಾ ಕಾನ್ಫರೆನ್ಸ್ ಆರಂಭ. ರಾತ್ರಿ ಒಂಬತ್ತಕ್ಕಾದರೂ ಅಲ್ಲಿಂದ ಹೊರಡಬೇಕು. ಹೊರಗೆ ಮೋಡ ಕವಿಯುತ್ತಿರುವುದನ್ನು ಯಾರೂ ಗಮನಿಸಿರಲಿಲ್ಲ. ಒಮ್ಮೆಗೇ ಗುಡುಗು ಮಿಂಚುಗಳ ಸಮೇತ ಮಳೆ ಧಾರಾಕಾರವಾಗಿ ಸುರಿಯಲಾರಂಭಿಸಿತು.

ಕೂಡಲೇ ಪದ್ಮಾ ಹೇಳಿದರು – "ಖಂಡಿತ ಈ ಮಳೆಯಲ್ಲಿ ಡ್ರೈವ್ ಮಾಡಬೇಡಿ. ಇಲ್ಲೇ ಮಲಗಿದ್ದು ನಾಳೆ ಬೆಳಗ್ಗೆ ಎದ್ದು ಹೋಗಿ. ನೀವು ಐದಕ್ಕೆ ಮನೆ ಬಿಟ್ಟರೆ ಏಳು ಗಂಟೆಯ ಒಳಗೆಲ್ಲಾ ಸಿಡ್ನಿಯಲ್ಲಿರ ಬಹುದು."

"ಸರಿಯಾಗಿ ಹೇಳಿದಿರಿ" ಎಂದ ಆಲ್ಬರ್ಟ್. ತಾಯಿಯ ಮಾತನ್ನು ಅನಿತಾ ಕೂಡ ಅನುಮೋದಿಸಿದಳು.

ರವಿಶಂಕರ್ ಅವರ ಚಿಂತಾಯಂತ್ರ ಕೆಲಸ ಮಾಡಲಾರಂಭಿಸಿತು. ಮನೆಯಲ್ಲಿ ಎರಡೇ ಬೆಡ್‌ರೂಮ್ ಇವೆ. ನಾನು ಪದ್ಮಾ ಒಂದರಲ್ಲಿ ಮಲಗುತ್ತೇವೆ ಸರಿ. ಅವರಿಬ್ಬರೂ? ಒಟ್ಟಿಗೆ ಇನ್ನೊಂದು ರೂಮಿನಲ್ಲಿ ಮಲಗಬೇಕೇ? ಮಾತನಾಡಲಿಲ್ಲ ರವಿ ಶಂಕರ್. ಅನಿತಾ ಪ್ರಶ್ನೆ ಹಾಕಿದಳು. "ಯಾರಾರು ಎಲ್ಲೆಲ್ಲಿ ಮಲಗುತ್ತಾರೆ ಹಾಗಾದರೆ?" ಆಲ್ಬರ್ಟ್ ಹೇಳಿದ "ಕೇಳುವುದೇನಿದೆ ಇದರಲ್ಲಿ. ಎರಡು ಜೋಡಿಗಳು, ಎರಡು ರೂಮುಗಳಿವೆ, ತುಂಬಾ ಸಿಂಪಲ್, ಬೇಬಿ." ಅನಿತಾ ಮಾತನಾಡಲಿಲ್ಲ.

ಮತ್ತಷ್ಟು ಯೋಚನೆ ಮಾಡಿ ರವಿಶಂಕರ್ ತಮ್ಮ ಮಸೂದೆಯನ್ನು ಮುಂದಿಟ್ಟರು. "ಅನಿತಾ ಒಂದು ರೂಮಿನಲ್ಲಿ, ಆಲ್ಬರ್ಟ್ ಮತ್ತೊಂದು ರೂಮಿನಲ್ಲಿ ಮಲಗಲಿ, ನಾನು ಮತ್ತು ಪದ್ಮಾ ಇಲ್ಲೇ ಲೌಂಜಿನಲ್ಲಿ ಮಲಗುತ್ತೇವೆ." ಕೇಳಿಸಿಕೊಂಡ ಆಲ್ಬರ್ಟ್ "ಇಲ್ಲಾ, ಇಲ್ಲಾ, ಅನ್‌ಫೇರ್" ಎಂದು ಕೂಗಿದ.

ತಂದೆಯ ಸಮಸ್ಯೆ ಬಗೆಹರಿಯಲಿಲ್ಲ. "ಹಾಗಾದರೆ ಅವರಿಬ್ಬರೂ ಒಂದೇ ರೂಮಿನಲ್ಲಿ." ತಾನು ಇನ್ನೂ ಏನೇನು ನೋಡಬೇಕೋ ಎಂದು ಶಪಿಸಿಕೊಂಡರು. ತಮ್ಮ ರೋಗಿಗಳಲ್ಲಿ ಕೆಲವರು ಮದುವೆ ಆಗದಿದ್ದರೂ ಮಕ್ಕಳನ್ನು ಪಡೆದಿದ್ದರು. ಹುಡುಗ ಹುಡುಗಿಯರು ಒಟ್ಟಿಗೇ ವಾಸಿಸುವುದು ಸಾಮಾನ್ಯ ಎನಿಸಿತ್ತು. ಆದರೆ ಅದು ತಮ್ಮ ಮನೆಯಲ್ಲಿಯೇ ಆದಾಗ ಸಹಿಸುವುದು ಹೇಗೆ? ನನ್ನ ಮಗಳೇ ಆ ಕೆಲಸ ಮಾಡುತ್ತಿದ್ದಾಳಲ್ಲಾ ಎಂಬ ರೋಷ ಒಮ್ಮೊಮ್ಮೆ, ಸಂಕಟ ಒಮ್ಮೊಮ್ಮೆ.

ಮಳೆ ಹೆಚ್ಚಾಗುತ್ತಲೇ ಹೋಯಿತು. ಸಂಭಾಷಣೆ ಮತ್ತೆತ್ತಲೋ ಹೊರಳಿತು. ರವಿಶಂಕರ್ ಚಿಂತಿಸಿದರು. 'ಎಲ್ಲರಿಗೂ ಹುಡುಗಾಟ. ಎದ್ದಿರುವ ಸಮಸ್ಯೆಯನ್ನು ಸೀರಿಯಸ್ಸಾಗಿ ತೆಗೆದು